ನೀರಾವರಿ ಹಾಗೂ ಇತರ ಸೌಲಭ್ಯಗಳ ಕುರಿತು ಸಾಧ್ಯಾಸಾಧ್ಯತೆಗಳ ಬಗ್ಗೆ ಕೂಲಕುಷವಾಗಿ ಪರಿಶೀಲನೆ ಮಾಡಲಾಗುತ್ತಿದೆ.

6. ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ಡ್ಯಾಂ ಅನ್ನು 1 ಮೀಟರ್ ಹೆಚ್ಚಿಸಲು ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿದ್ದು ನಿಜವೇ;

ಹಾಗಿದ್ದಲ್ಲಿ, ಸದರಿ ಯೋಜನೆಯ ಕಾಮಗಾರಿ ಕೈಗೆತ್ತಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಕಾಮಗಾರಿ ಈಗ ಯಾವ ಹಂತದಲ್ಲಿದೆ ತಿಳಿಸುವುದು;

ನಿಜ

ಬಂದಿದೆ ಪ್ರಸ್ತಾವನೆ ಕುರಿತಂತೆ ತಾಂತ್ರಿಕ ಸಲಹಾ ಸಮಿತಿಯು ಪರಿಶೀಲಿಸಿ ಹಲವು ಆಕ್ಷೇಪಣೆಗಳನ್ನು ಮಾಡಿದ್ದು ಈ ಆಕ್ಷೇಪಣೆಗಳಿಗೆ ಸೂಕ್ತ ವಿವರಣೆಗಳೊಂದಿಗೆ ಪುನಃ ಸಮಿತಿಯ ಪರಿಶೀಲನೆಗೆ ಮಂಡಿಸಲಾಗುತ್ತಿದೆ. ತಾಂತ್ರಿಕ ಸಲಹಾ ಸಮಿತಿಯು ನೀಡಲಿರುವ ಅಭಿಪ್ರಾಯವನ್ನು ಆಧರಿಸಿ ಅಣೆಕಟ್ಟೆಯನ್ನು 1 ಮೀ ಎತ್ತರಿಸುವ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

7. ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ಭಾಗದ ಗ್ರಾಮಗಳಲ್ಲಿ ಪ್ರತಿ ವರ್ಷ ನೆರೆ ಹಾವಳಿಯಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು, ಹಾನಿಯಾಗಿದ್ದು ಹಾಗೂ ಪ್ರವಾಹಕ್ಕೆ ಸಿಲುಕಿದ ಮನೆಗಳು ದುರಸ್ತಿಪಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಈ ವಿಷಯವು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (309)149
2) ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು)
3) ಉತ್ತರಿಸುವ ಸಚಿವರು : (ಶ್ರೀಬಸವರಾಜ್ ಬೊಮ್ಮಾಯಿ) ಜಲ ಸಂಪನ್ಮೂಲ ಸಚಿವರು

1. ಹಬ್ಬೆ ಹಳ್ಳದಿಂದ ಮದಗದಕೆರೆ ಅಯ್ಯನ ಕೆರೆಗೆ ನೀರು ಹರಿಸುವ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಹೆಬ್ಬೆಹಳ್ಳ ಮದಗದ ಕೆರೆಗೆ ಸಂಪರ್ಕ ಕಾಲುವೆ ಯೋಜನೆಯ ರೂ.80.00 ಕೋಟಿಗಳ ಪ್ರಸ್ತಾವನೆಗೆ ತಾಂತ್ರಿಕ ಸಲಹಾ ಸಮಿತಿ ಮತ್ತು ಎಂ.ಐ.ಪಿ.ಸಿ. ಬೋರ್ಡ್ ವಿಧಿಸಿರುವ ಕೆಲವು ಷರತ್ತುಗಳಿಗೆ ಒಳಪಟ್ಟಂತೆ ಒಪ್ಪಿಗೆ ನೀಡಿವೆ ಈ ಪ್ರಸ್ತಾವನೆಯಲ್ಲಿ ಅಯ್ಯನ ಕೆರೆಗೆ ನೀರು ಹರಿಸುವ ಅಂಶ ಸೇರಿರುವುದಿಲ್ಲ.

ಯೋಜನೆಗೆ ಸುಮಾರು 186 ಎಕರೆ ಅರಣ್ಯ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ಅರಣ್ಯ (ಸಂಸ್ಕರಣೆ) ಕಾಯ್ದೆ 1980 ರ ಪ್ರಕಾರ ಅರಣ್ಯೇತರ ಚಟುವಟಿಕೆಗಳಿಗೆ ಅರಣ್ಯವನ್ನು ಬಿಡುಗಡೆ ಮಾಡುವ ಸಲುವಾಗಿ ಅರಣ್ಯ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

2. ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಯು ಯಾವ ಹಂತದಲ್ಲಿದೆ?

ಹಣಕಾಸಿನ ಒಪ್ಪಿಗೆಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (105)150
ಸದಸ್ಯರ ಹೆಸರು : ಶ್ರೀ ಶ್ರೀಕಾಂತ್ ಕುಲಕರ್ಣಿ
ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

ಅ) ಜಮಖಂಡಿ ತಾಲ್ಲೂಕಿನ ಕಂಕಣವಾಡಿ ಗ್ರಾಮದ ಸುಮಾರು 500 ಎಕರೆ ಜಮೀನು ಕೃಷ್ಣಾ ಯೋಜನೆಯ ಹಿನ್ನೀರಿನಿಂದ ಸುತ್ತುವರಿಯಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ;

ಬಂದಿದೆ.

ಆ) ಕೃಷಿ ಮಾಡಲು ಅನಾನುಕೂಲವಾದ ನಡುಗಡ್ಡೆಯಂತಿರುವ ಗುಹೇಶ್ವರ ನಡುಗಡ್ಡೆಯ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು;

ನಡುಗಡ್ಡೆಯ ಜಮೀನು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಆರ್.ಎಲ್.521.00 ಮೀ.ರ ವರೆಗಿನ ಜಮೀನನ್ನು ಹಾಗೂ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಗುಹೇಶ್ವರ ನಡುಗಡ್ಡೆಯ ಜಮೀನು ಸದರಿ ಮಟ್ಟದ ಮೇಲ್ಮಟ್ಟದಲ್ಲಿದ್ದು, ಹಿನ್ನೀರಿನಲ್ಲಿ ಮುಳುಗುವುದಿಲ್ಲ. ಹೀಗಾಗಿ ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇರವುದಿಲ್ಲ.

ಇ) ಹಾಗಿದ್ದಲ್ಲಿ, ರೈತರಿಗೆ ಈ ಜಮೀನುಗಳ ಪರಿಹಾರ ಧನವನ್ನು ಸರ್ಕಾರ ತಲುಪಿಸುವುದು ಯಾವಾಗ?

ಉದ್ಭವಿಸುವುದಿಲ್ಲ.